## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.301/2023**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ःः ವಿರುದ್ದ ःः-

ಆರೋಪಿ ನಂ: 1. ಮುಸ್ತಫ ತಂದೆ ಚಾವುಸ್ @ ಬಾಬುಮಿಯ್ಯಾ ಅರಬುರ
ವಃ 20, ಉಃಕೂಲಿ

2. ಉಮೇಶ ತಂದೆ ದೇವಿಂದ್ರಪ್ಪಾ ತೆಲಕೂರ
ವಃ 36 ವರ್ಷ, ಉಃ ಒಕ್ಕಲುತನ

3. ಮಲ್ಲಿಕಾರ್ಜುನ @ ಮಲ್ಲಪ್ಪಾ ತಂದೆ ದೇವಿಂದ್ರಪ್ಪಾ ತೆಲಕೂರ
ವಃ 27 ವರ್ಷ , ಉಃ ಒಕ್ಕಲುತನ ,

ಎಲ್ಲರೂ ಸಾಃ ಊಡಗಿ ಗ್ರಾಮ , ತಾಃ ಸೇಡಂ

----

### ದೋಷಾರೋಪಣೆ

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 11-01-2023 ರಂದು ಬೆಳಗ್ಗೆ 11.15 ಗಂಟೆಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಊಡಗಿ ಗ್ರಾಮದ ಹನುಮಾನ ಮಂದಿರದ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಚಾಸಾ ನಂ 1, 4 ನೇದ್ದವನು ಹೊರಗಡೆಯಿಂದ ತನ್ನ ಮನೆಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿ 1 ರಿಂದ 3 ನೆದ್ದವರು ಕೂಡಿ ಬಂದು ಚಾಸಾ 1 ನೆದ್ದವನಿಗೆ ತಡೆದು ನಿಲ್ಲಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 341 ಸಂಗಡ 34 ರಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಏಕೋದ್ದೇಶವನ್ನು ಈಡೇರಿಸುವುದರ ಸಲುವಾಗಿ ಆರೋಪಿ ನಂ 1 ನೇದ್ದವನು ಚಾಸಾ ನಂ 1 ನೇದ್ದವರ ಜೊತೆಗೆ ಕುಸ್ತಿಗೆ ಬಿದ್ದು ಕೈಯಿಂದ ಹೊಟ್ಟೆಗೆ ಹೊಡೆದಿದ್ದು , ಆರೋಪಿ 1 ನೆದ್ದವನು ಮತ್ತು 2 ನೆದ್ದವರು ಕೂಡಿ ಚಾಸಾ 1 ನೆದ್ದವನಿಗೆ ಕಾಲಿನಿಂದ ಎಡ ಮಗ್ಗಲಿಗೆ ಎಡಗಡೆ ಸೊಂಟಕ್ಕೆ ಮತ್ತು ಹೊಟ್ಟೆಗೆ ಒದ್ದು ಗುಪ್ತಗಾಯ ಪಡಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.323 ಸಂಗಡ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ

ನೀವು ನಿಮ್ಮ ಏಕೋದ್ದೇಶವನ್ನು ಈಡೇರಿಸುವುದರ ಸಲುವಾಗಿ ಆರೋಪಿ ನಂ 3 ನೇದ್ದವನು ಕಲ್ಲಿನಿಂದ ಚಾಸಾ ನಂ 1 ನೇದ್ದವನ ಎಡಕಣ್ಣಿನ ಮೇಲೆ ಹೊಡೆದು ಗುಪ್ತಗಾಯ ರಕ್ತಗಾಯ ಪಡಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.324 ಸಂಗಡ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಏಕೋದ್ದೇಶವನ್ನು ಈಡೇರಿಸುವುದರ ಸಲುವಾಗಿ ಆರೋಪಿ ನಂ 1 ರಿಂದ 3 ನೇದ್ದವರು ಕೂಡಿ ಬಂದು ಚಾಸಾ 1 ನೆದ್ದವನಿಗೆ ತಡೆದು ನಿಲ್ಲಿಸಿ ಆರೋಪಿ 1 ನೆದ್ದವನು ಮಾಕೆ ಲವಡೆ ದೇವ್ಯಾ ನೀನು ನನಗೆ ನಮ್ಮ ಕಡಲೆ ಹೊಲದಲ್ಲಿ ಬರಬೇಡ ಅಂತಾ ಬೈಯುತ್ತಿ ಮಗನೆ ನಿನಗೆ ಸೊಕ್ಕು ಬಂದಿದೆ ಇವತ್ತು ಏನಾದರು ಆಗಲಿ ನಿನಗೆ ಬಿಡುವುದಿಲ್ಲಾ ಅಂತಾ ಹಾಗೂ ಆರೋಪಿ 2 ಮತ್ತು 3 ನೆದ್ದವರು ಚಾಸಾ 1 ನೆದ್ದವನಿಗೆ ಭೋಸಡಿ ಮಗನೆ ನೀನು ನಮ್ಮ ಹುಡಗನಿಗೆ ಜಗಳ ಮಾಡುತ್ತಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.504 ಸಂಗಡ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಏಕೋದ್ದೇಶವನ್ನು ಈಡೇರಿಸುವುದರ ಸಲುವಾಗಿ, ಚಾಸಾ 1 ನೇದ್ದವರ ಜೊತೆ ಜಗಳ ತೆಗೆದು , ಆರೋಪಿತರೆಲ್ಲರೂ ಜಗಳ ಬಿಟ್ಟು ಹೋಗುವಾಗ ಚಾಸಾ 1 ನೆದ್ದವನಿಗೆ ಬೊಸಡಿ ಮಗನೆ ನೀನು ನನ್ನ ಮೆಲೆ ಕೇಸ್ ಗೀಸ್ ಮಾಡಿದರೆ ನಿನಗೆ ಜೀವಂತ ಬಿಡುವುದಿಲ್ಲಾ ಖಲಾಸ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿ ಹೋಗಿದ್ದು ಇರುತ್ತದೆ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.506 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 30-10-2024 ಪ್ರ.ದ.ನ್ಯಾದಂ. ಸೇಡಂ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.301/2023**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ:1.ಮುಸ್ತಫ ತಂದೆ ಚಾವುಸ್ @ ಬಾಬುಮಿಯ್ಯಾ ಅರಬುರ
ವಃ 20, ಉಃಕೂಲಿ
ಸಾಃ ಊಡಗಿ ಗ್ರಾಮ , ತಾಃ ಸೇಡಂ ಹಾಗೂ ಇತರರು.

### ಆರೋಪಿತರ ಹೇಳಿಕೆ

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1 ಆ-2

ಆ-3

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1 ಆ-2

ಆ-3

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 30-10-2024 ಪ್ರ.ದ.ನ್ಯಾದಂ. ಸೇಡಂ.